8. ಪ್ರಕಟಣೆ : ವಿಷಯ: ಕರ್ನಾಟಕ ಕಾನೂನುಗಳ ಕ್ರೋಢೀಕೃತ ಸಂಪುಟಗಳ ಪರಿಷ್ಕೃತ ಆವೃತ್ತಿಯ ಬಿಡುಗಡೆ ಬಗ್ಗೆ.

ದಿನಾಂಕ: 11.07.2014 ರಂದು ಬೆಳಿಗ್ಗೆ 09.00 ಗಂಟೆಗೆ ವಿಧಾನ ಸೌಧದ 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ವತಿಯಿಂದ ಕರ್ನಾಟಕ ಕಾನೂನುಗಳ ಕ್ರೋಢೀಕೃತ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡುವವರು ಇದ್ದಾರೆ. ಆದುದರಿಂದ ಮಾನ್ಯ ಸದಸ್ಯರುಗಳು ಸದರಿ ಸಮಾರಂಭದಲ್ಲಿ ಉಪಸ್ಥಿತರಿರುವಂತೆ ಈ ಮೂಲಕ ಕೋರಲಾಗಿದೆ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ: 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 7 ಗಂಟೆ 52 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 11.07.2014 ರಂದು ಬೆಳಿಗ್ಗೆ: 10.00 ಗಂಟೆಗೆ ಸೇರುವಂತೆ ನಿಶ್ಚಯಿಸಿತು)

ಭಾಗ–2

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಅನುಬಂಧ–1

ರಾಯಭಾಗ ತಾಲ್ಲೂಕಿನಲ್ಲಿ ಖಾಲಿ ಇರುವ ಹುದ್ದೆಗಳು

1632 (1572); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಆರೋಗ್ಯ ಕೇಂದ್ರಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು (ವೃಂದವಾರು ವಿವರ ನೀಡುವುದು)?

ಆ) ರಾಯಭಾಗ ತಾಲೂಕಿನ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಹಾಗೂ ಇತರ ಚಿಕಿತ್ಸಾ ತಜ್ಞರುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಆರೋಗ್ಯ ಕೇಂದ್ರಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ: 145. (ವೃಂದವಾರು ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ).

ಆ) ಬಂದಿದೆ.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧ–2 ರಲ್ಲಿ ನೀಡಲಾಗಿದೆ.

ಕರ್ನಾಟಕ ವಿಧಾನಸಭೆ ಚುನಾವಣೆ - 2018

ಅನುಬಂಧ-I

ಚುನಾವಣಾ ಪೂರ್ವ ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಸಮಿತಿಗಳಿಗೆ ಸಿಬ್ಬಂದಿಯನ್ನು ನಿಯೋಜಿಸಿರುವ ವಿವರ

ಕ್ರ.ಸಂ	ಹುದ್ದೆಗಳು	ಜಿಲ್ಲಾ ಮಟ್ಟದ ಅಧಿಕಾರಿಗಳು			ಜಿಲ್ಲಾ ಮಟ್ಟದ ಸಿಬ್ಬಂದಿಗಳು			ಜಿಲ್ಲಾ ಮಟ್ಟದ ಸಹಾಯಕರು			ಜಿಲ್ಲಾ ಮಟ್ಟದ ಮೀಸಲು ಸಿಬ್ಬಂದಿಗಳು			ವಿಧಾನಸಭಾ ಕ್ಷೇತ್ರ ಮಟ್ಟದ ಅಧಿಕಾರಿಗಳು			ವಿಧಾನಸಭಾ ಕ್ಷೇತ್ರ ಮಟ್ಟದ ಸಿಬ್ಬಂದಿಗಳು			ವಿಧಾನಸಭಾ ಕ್ಷೇತ್ರ ಮಟ್ಟದ ಸಹಾಯಕರು			ವಿಧಾನಸಭಾ ಕ್ಷೇತ್ರ ಮಟ್ಟದ ಮೀಸಲು ಸಿಬ್ಬಂದಿಗಳು			ವಿಧಾನಸಭಾ ಕ್ಷೇತ್ರ ಮಟ್ಟದ ಸಹಾಯಕರು			ಸಿಬ್ಬಂದಿಗಳ ಒಟ್ಟು ಅವಶ್ಯಕತೆ			ಒಟ್ಟು ಸಿಬ್ಬಂದಿಗಳು		
		ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ
1	ಸಿ ಆ ಮತ್ತು ಬಿ ಇ ಅಧಿಕಾರಿಗಳು	1	0	1																										1	0	1
2	ಸಾಮಾನ್ಯ ಶಸ್ತ್ರ ವೈದ್ಯಾಧಿಕಾರಿಗಳು													1	1	0	1	1	0	1	1	0	1	0	1	1	1	0	1	1	0	7	6	1
3	ಮಾಜಿ ವೈದ್ಯಾಧಿಕಾರಿ				1	0	1																									1	0	1
4	ಜನರಲ್ ಮೆಡಿಷನ್				1	0	1																									1	0	1
5	ಸ್ತ್ರೀರೋಗ ಶಸ್ತ್ರಾ				1	1	0	1	0	1	1	1	0																			3	2	1
6	ಕಿವಿ ಮೂಗು ಗಂಟಲು ಶಸ್ತ್ರ				1	0	1																									1	0	1
7	ಜನರಲ್ ಸರ್ಜನ್				1	1	0																									1	1	0
8	ಮಕ್ಕಳ ತಜ್ಞರು				1	0	1	1	0	1	1	0	1																			3	0	3
9	ಅರವಳಿಕೆ ತಜ್ಞರು				1	0	1																									1	0	1
10	ಎದೆಯ ತೇರಪಿ ತಜ್ಞರು				1	1	0																									1	1	0
11	ನೇತ್ರ ತಜ್ಞರು				1	0	1																									1	0	1
12	ಚರ್ಮರೋಗ ತಜ್ಞರು				1	0	1																									1	0	1
13	ದಂತ ವೈದ್ಯಾಧಿಕಾರಿ	1	1	0				1	1	0	1	1	0																			3	3	0
14	ಹಿರಿಯ ವೈದ್ಯರು							1	0	1	1	1	0																			2	1	1
15	ಇ ಮಾಹಿತಿ										1	0	1																			1	0	1
16	ಸಹಾಯಕ ಅರವಳಿಕೆಯಧಿಕಾರಿಗಳು				1	0	1			1																					1	0	1
17	ಶುಶ್ರೂ ಅಧಿಕ್ಷಕರು				1	0	1	1	0	1	1	0	1																			3	0	3
18	ಶುಶ್ರೂಷಣಾಧಿಕಾರಿ ಗ್ರೇಡ್-I				1	0	1																									1	0	1
19	ಆರೋಗ್ಯ ಶಿಕ್ಷಣಾಧಿಕಾರಿ	1	1	0											1					1	1	0										2	2	0
20	ಹಿರಿಯ ವೈದ್ಯಕೀಯ ಮೇಲ್ವಿಚಾರಕರು	1	0	1																												1	0	1
21	ಹಿರಿಯ ಫಾರ್ಮಸಿಸ್ಟ್				1	0	1																									1	0	1
22	ಹಿರಿಯ ಪ್ರಥಮ ದರ್ಜೆಸಹಾಯಕರು				1	1	0																									1	1	0

ಅಸಂ	ಹುದ್ದೆಗಳು	ಪ್ರಾ ಸಂ ಮಾಹಿತಿ			ಸಾಮಾನ್ಯ ಮಹಿಳೆ			ಪ.ಜಾ			ಪ.ಪಂ			ಪ್ರವರ್ಗ-1			ಪ್ರವರ್ಗ-2ಎ			ಪ್ರವರ್ಗ-2ಬಿ			ಪ್ರವರ್ಗ-3ಎ			ಪ್ರವರ್ಗ-3ಬಿ			ಒಟ್ಟು ಹುದ್ದೆಗಳು		
		ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ	ಮಂಜೂರು	ಕಾರ್ಯನಿರ್ವಹಣೆ	ಖಾಲಿ
23	ಕಿರಿಯ ಪ್ರಶಿಕ್ಷಣಾರ್ಥಿಗಳು				1	1	0	1	1	0	1	1	0	1	1	0	1	1	0	1	1	0	1	1	0	1	0	1				9	8	1
24	ಜಿಪಿಓಗಳು				20	13	7	6	5	0	6	5	1							1	1	0				1	0	1	1	1	0				35	26	9
25	ಹಿ.ಮ.ಅ.ಸಹಾಯಕ	1	0	1										1	1	0				1	0	1							1	0	1				4	1	3
26	ಹಿ.ಮ.ಅ.ಸಹಾಯಕಿ	1	1	0							1	1	0	1	1	0	1	0	1	1	1	0	1	1	0				1	1	0				7	6	1
27	ಕ ಮ.ಅ.ಸಹಾಯಕ													2	1	1	5	1	4	4	2	2	4	2	2	3	1	2	4	2	2	1	0	1	23	9	14
28	ಕ ಮ.ಅ.ಸಹಾಯಕಿ													3	2	1	8	3	5	4	4	0	5	3	2	8	6	2	8	4	4	1	1	0	37	23	14
29	ಟೈಪಾರ್ಯಾಸಿಸ್ಟ್				2	0	2	2	1	1	2	1	1	1	1	0	1	1	0	1	1	0	1	1	0	1	1	0	1	1	0	1	1	0	13	9	4
30	ಪ್ರ.ದ.ಸಹಾಯಕ	1	1	0	2	0	2	1	1	0	2	2	0	1	1	0	1	0	1	1	0	1	1	0	1	1	0	1							11	5	6
31	ಡ್ರೈ.ದ.ಸಹಾಯಕ	1	0	1	2	1	1	1	0	1	1	1	0																			1	1	0	6	3	3
32	ದತ್ತ ಅಧಿಕಾರಿ				1	1	0	1	1	0	1	1	0																						3	3	0
33	ನಾಡಕಛೇರಿ	1	1	0	2	1	1	2	0	2	2	0	2							1	0	1										1	1	0	9	3	6
34	ಗ್ರೂಪ್ ಡಿ	1	1	0	33	1	32	12	1	11	12	1	11	1	0	1	1	1	0	3	1	2	1	0	1	2	0	2	2	0	2	1	0	1	69	6	63
																																			ಒಟ್ಟು ಹುದ್ದೆಗಳ ವಿವರ			264	119	145

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ತಜ್ಞ ವೈದ್ಯರು, ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:

- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ) ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವ ಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹ 80,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹ 60,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.
- ಕೆ.ಹೆಚ್.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ, ಕ್ರಮವಾಗಿ ಮಾಸಿಕ ₹ 65,000 ಹಾಗೂ ₹ 50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದೆ. ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹5,000 ದಿಂದ ₹ 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹ 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ₹1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ಆದರೂ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

- ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
- ಭಾರತ ಸಂವಿಧಾನ ಅನುಚ್ಛೇದ 371 ಜೆ ರೀತ್ಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರಾದೇಶಿಕ ಮಟ್ಟದ ಸ್ಥಳೀಯ ವೃಂದ್ ಕುರಿತಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಹುದ್ದೆಗಳಿಗೆ ಸಂಬಂಧ ಪಟ್ಟ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಂದ ಇಚ್ಛೆ ಪತ್ರವನ್ನು ಪಡೆದು, ತದನಂತರ ಖಾಲಿ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಸ್ಥಳೀಯ ವೃಂದ ಮತ್ತು ಮೀಸಲಾತಿ ನಿಯಮಗಳನ್ವಯ ವರ್ಗೀಕರಿಸಿ, ತದನಂತರ ತಜ್ಞ ವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ದಂತ ಆರೋಗ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಗಳ ಹಲವು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಹಾಗೂ ಇತರೆ ಹುದ್ದೆಗಳನ್ನು ಇಲಾಖಾ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಮತ್ತು ಕೆಲವು ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಪಡಿತರ ಚೀಟಿ ಹಂಚಿಕೆ

1633 (2073); ಶ್ರೀ ಅನಿಲ್ ಲಾಡ್ (ಬಳ್ಳಾರಿ ನಗರ)

ಅ) ಬಳ್ಳಾರಿ ನಗರದ ಪಡಿತರ ಚೀಟಿ ವ್ಯವಸ್ಥೆಯಲ್ಲಿ ಪಡಿತರ ಹಂಚಿಕೆಯಲ್ಲಿ ಲೋಪವಾಗಿರುವುದು ನಿಜವಾದ ಫಲಾನುಭವಿಗಳಿಗೆ ಹಾಗೂ ಜನ ಸಂಖ್ಯೆಗೆ ಅನುಗುಣವಾಗಿ ಹಂಚಿಕೆಯ ವಲಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;